## ಕಲ್ಲತ್ತಿ ಮರ...

ಹುಟ್ಟಲೊಂದಷ್ಟು ಮಣ್ಣು, ಉಸಿರಾಡಲೊಂದಷ್ಟು ಗಾಳಿ, ಮೊಳೆಯಲೊಂದಷ್ಟು ನೀರು ದೊರೆತರೆ ಸಾಕು ಕೆಲವು ಗಿಡಮರಗಳು ಟೊಂಕ ಕಟ್ಟಿ ಬೆಳೆದುಬಿಡುತ್ತವೆ. ಹೀಗೆ ಕಲ್ಲು ಬಂಡೆಗಳ ಸಂದಿಗೊಂದಿಗಳನ್ನೇ ಆವಾಸವನ್ನಾಗಿ ಮಾಡಿಕೊಂಡು, ರೆಂಬೆ ಕೊಂಬೆಗಳ ತುಂಬೆಲ್ಲ ಬಿಳಲುಗಳನ್ನು ಹೊರಚಾಚಿ ಬೆಳೆಯುವ ಕಲ್ಲತ್ತಿ ಮರವೆಂಬ ಸೋಜಿಗವನ್ನು ನೀವು ಬಯಲುಸೀಮೆಯ ಬೆಟ್ಟಗುಡ್ಡಗಳಲ್ಲಿ ಕಾಣಬಹುದು. ಇತ್ತೀಚೆಗೆ ನಮ್ಮೂರ ಬೆಟ್ಟದ ಮೇಲೆ ಚಾರಣಕ್ಕೆ ತೆರಳಿದ್ದಾಗ ಇಂತಹ ಹಲವಾರು ಮರಗಳು ಸಮೃದ್ಧವಾಗಿ ಬೆಳೆದಿರುವುದನ್ನು ನೋಡಿ ಅಚ್ಚರಿ, ಕುತೂಹಲ ಮೂಡಿತು.

ಕಲ್ಲಲ್ಲೇ ಹತ್ತಿ (ಹತ್ತುವುದು ಎಂದರೆ ಹುಟ್ಟೋದು ಎಂಬ ಅರ್ಥ ನಮ್ಮಲ್ಲಿದೆ) ಕಲ್ಲಲ್ಲೇ ಬೆಳೆದು, ಕಲ್ಲಿಗೊಂದು ಸಿಂಗಾರ ನೀಡುವ ಈ ಕಲ್ಲತ್ತಿ ಮರಗಳು ಇರುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡರೆ ಚೆಂದಾಗಿ ಬೆಳೆದು ನಿಲ್ಲಬಹುದೆಂಬುದಕ್ಕೆ ಸಾಕ್ಷಿಯಂತಿವೆ. ದೂರದಿಂದ ನೋಡಿದರೆ ಆಲದ ಮರದಂತೆ ಕಾಣುತ್ತವೆಯಾದರೂ, ಇವು ಆಲದ ಮರಗಳಲ್ಲ. ಈ ಮರಗಳಷ್ಟೇ ಅಲ್ಲದೆ ಬಂಡೆ ಜರಗು ಮತ್ತು ಬಾದೆ ಎಂಬ ಹುಲ್ಲುಗಳು ಬಂಡೆಗಳ ಸಂದಿಗೊಂದಿಗಳಲ್ಲಿರುವ ಪುಟ್ಟ ಜಾಗವನ್ನೇ ಆವಾಸವನ್ನಾಗಿ ಮಾಡಿಕೊಂಡು ಮಳೆಗಾಲದಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ. ದನ ಕರುಗಳಿಗೆ ಮೇವಾಗುತ್ತವೆ. ಬೇಸಿಗೆ ಕಾಲದಲ್ಲಿ ಒಣಗಿದಂತೆ ಕಂಡರೂ ನಾಲ್ಕು ಹನಿ ಮಳೆ ಬೀಳುತ್ತಲೇ ಚಿಗುರೊಡೆಯುತ್ತವೆ. ಹೀಗೆ ಇರುವ ಸಣ್ಣ ಪುಟ್ಟ ಜಾಗಗಳಲ್ಲಿ ಬೆಳೆದು, ಪರೋಪಕಾರವ ಮೆರೆದು ಜೀವಿಸುತ್ತವೆ.

—ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ





## ಬುದ್ಧಿವಂತ ಅಕಾರ್ನ್ ಮರಕುಟಿಗ

ಪ್ರಪಂಚದ ಬಹುತೇಕ ಕಡೆಗಳಲ್ಲಿ ಕಂಡುಬರುವ ಪಿಸಿಡೇ ಕುಟುಂಬಕ್ಕೆ ಸೇರಿದ ಮರ ಕುಟಿಗಗಳಲ್ಲಿ ಕೆಂಪು ತಲೆ ಬಿಳಿ ದೇಹದ ಅಕಾರ್ನ್ ಮರ ಕುಟಿಗವೂ ಒಂದು. ಸುಮಾರು ಇನ್ನೂರು ಪ್ರಭೇದಗಳಿಂದ ಗುರುತಿಸುವ ವೃಕ್ಷವಾಸಿ ಮರ ಕುಟಿಗಗಳು, ಮರದ ತೊಗಟೆ, ಕಾಂಡವನ್ನು ಕೊರೆಯಲು ತಕ್ಕಂತಹ ಉದ್ದನೆಯ ಗಟ್ಟಿಮುಟ್ಟಾದ ಚೂಪಾದ ಗಡಸು ಕೊಕ್ಕನ್ನು, ಮರದ ಕಾಂಡಗಳಿಗೆ ಆತುಕೊಳ್ಳಲು ಹರಿತವಾದ ಉದ್ದ ಉಗುರುಗಳನ್ನು ಹೊಂದಿರುತ್ತವೆ. ಕುತ್ತಿಗೆಯ ಬಲವಾದ ಸ್ನಾಯುಗಳು ಮತ್ತು ಅದಕ್ಕೆ ತಕ್ಕಂತಿರುವ ತಲೆ ಬುರುಡೆಯಿಂದಾಗಿ ಮರದ ತೊಗಟೆಯನ್ನು ನಿಮಿಷಕ್ಕೆ 120ಕ್ಕೂ ಹೆಚ್ಚು ಬಾರಿ ಗಟ್ಟಿಯಾಗಿ ಘಟ್ಟಿಸ (ಕುಕ್ಕ) ಬಲ್ಲವು. ಮೆಲನಿನ್ ಕೊರತೆಯಿಂದಾಗಿ ಬಿಳಿ ಬಣ್ಣವನ್ನು ಹೊಂದಿರಬಹುದು ಎನ್ನಲಾಗುವ ಅಕಾರ್ನ್ ಮರ ಕುಟಿಗವು ಬಲು ಬುದ್ಧಿವಂತ ಪಕ್ಷಿ. ಇದು ಹುಳು ಹುಪ್ಪಡಿಗಳನ್ನು ತಿನ್ನಲು, ವಾಸಿಸುವ ಪೊಟರೆ ಕೊರೆಯಲು ಮಾತ್ರ ಮರ ಕುಕ್ಕುವುದಿಲ್ಲ. ಮುಂಜಾಗೃತಾ ಕ್ರಮವಾಗಿ ಮಳೆಗಾಲಕ್ಕೆ ಆಹಾರ ಸಂಗ್ರಹಿಸಿಡಲು, ಒಣಗಿದ ಗಟ್ಟಿ ಮರಗಳಲ್ಲಿ ನೂರಾರು ರಂಧ್ರಗಳನ್ನು ಕೊರೆದು, ಚಿತ್ರದಲ್ಲಿ ಕಾಣುವಂತೆ ಅಕಾರ್ನ್ ಹಾಗೂ ಇನ್ನಿತರ ಬೀಜಗಳನ್ನು ಸಂಗ್ರಹಿಸಿಡುತ್ತದೆ. ಇವು ಪೂರ್ವ ಅಮೆರಿಕದ ಕಾಡುಗಳಲ್ಲಿ, ಜೌಗು, ಅರಣ್ಯ ಪ್ರದೇಶಗಳಲ್ಲಿ ಕಂಡುಬರುತ್ತವೆ.

—ಎಸ್.ಎನ್. ಚಂದ್ರಕಲಾ, ಕೊಪ್ಪ

